ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 279 ಗ್ರಾಪಂಕಾ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 29.07.2016

**ಅಧಿಕೃತ ಜ್ಞಾಪನ**

**ವಿಷಯ:** ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳ ಅಂತರ ಜಿಲ್ಲಾ ವರ್ಗಾವಣೆಯ ಬಗ್ಗೆ.

****

ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ನಿಯಮ 16–ಎ ರನ್ವಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಅವರ ಕೋರಿಕೆಯ ಮೇರೆಗೆ ಅವರು ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲೆಯಿಂದ **ಬಾಗಲಕೋಟೆ ಜಿಲ್ಲೆಗೆ** ಅಂತರ ಜಿಲ್ಲಾ ವರ್ಗಾವಣೆ ಮಾಡಿ, ಕೆಳಕಂಡ ಎಲ್ಲಾ ಷರತ್ತುಗಳನ್ನು ಪೂರೈಸುವ ನಿಬಂಧನೆಗೊಳಪಡಿಸಿದ ಆದೇಶಿಸಿದೆ.

| ಕ್ರ.ಸಂ. | ನೌಕರರ ಹೆಸರು | ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆ, ಸ್ಥಳ ಮತ್ತು ಜಿಲ್ಲೆ | ವರ್ಗಾಯಿಸಿರುವ ಜಿಲ್ಲೆ |
|---|---|---|---|
| 1 | ಶ್ರೀಮತಿ ಚಂದ್ರವ್ವ ಗಡಪ್ಪನವರ್ | ಕಾರ್ಯದರ್ಶಿ ಗ್ರೇಡ್–2, ಸೈದೂರು ಗ್ರಾಮ ಪಂಚಾಯತಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. | ಬಾಗಲಕೋಟೆ ಜಿಲ್ಲೆ. |
| 2 | ಶ್ರೀ ಅನೀಲ ಹನಮಂತ | ಕಾರ್ಯದರ್ಶಿ, ನಂದಿಹಾಳ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ. | ಬಾಗಲಕೋಟೆ ಜಿಲ್ಲೆ. |
| 3 | ಶ್ರೀ ಪರಗೊಂಡ ಮಲ್ಲಪ್ಪ ಅಪ್ಪಣ್ಣ | ದ್ವಿ.ದ.ಲೆ.ಸ., ತಾವರಘಟ್ಟ ಗ್ರಾಮ ಪಂಚಾಯತಿ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. | ಬಾಗಲಕೋಟೆ ಜಿಲ್ಲೆ. |
| 4 | ಶ್ರೀ ಸುರೇಶ ರಾ. ಪೋತರಡ್ಡಿ | ದ್ವಿ.ದ.ಲೆ.ಸ., ಅಮೀನಗಡ ಗ್ರಾಮ ಪಂಚಾಯತಿ, ಮಾನವಿ ತಾಲ್ಲೂಕು, ರಾಯಚೂರು ಜಿಲ್ಲೆ. | ಬಾಗಲಕೋಟೆ ಜಿಲ್ಲೆ. |
| 5 | ಶ್ರೀ ಪರಗೊಂಡ ಮಲ್ಲಪ್ಪ ಅಪ್ಪಣ್ಣ | ದ್ವಿ.ದ.ಲೆ.ಸ., ತಾವರಘಟ್ಟ ಗ್ರಾಮ ಪಂಚಾಯತಿ, ಭದ್ರಾವತಿ ತಾಲ್ಲೂಕು ಶಿವಮೊಗ್ಗ ಜಿಲ್ಲೆ | ಬಾಗಲಕೋಟೆ ಜಿಲ್ಲೆ. |
| 6 | ಶ್ರೀ ಈರಪ್ಪ ತಂದೆ ಭೀಮಪ್ಪ ಕೋರಿಶೆಟ್ಟಿ | ದ್ವಿ.ದ.ಲೆ.ಸ., ಕೊಂಡ್ಲಿ ಗ್ರಾಮ ಪಂಚಾಯತಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ. | ಬಾಗಲಕೋಟೆ ಜಿಲ್ಲೆ. |

**(ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಅನುಮೋದಿತ)**

**ಷರತ್ತುಗಳು:**

1) ಮೊದಲು ನೌಕರರು ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲೆಯಲ್ಲಿನ ತಮ್ಮ ಜೇಷ್ಠತೆಯನ್ನು ಬಿಟ್ಟು ಕೊಡಲು ಹಾಗೂ ವರ್ಗಾವಣೆಗೊಂಡ ಜಿಲ್ಲೆಯಲ್ಲಿನ ತನ್ನ ವೃಂದದ ನೌಕರರ ಜೇಷ್ಠತಾ ಪಟ್ಟಿಯಲ್ಲಿ ಕೊನೆಯವನಾಗಿ ಸೇರ್ಪಡೆಗೊಳ್ಳಲು ಸಿದ್ದರಿರುವುದಾಗಿ ಲಿಖಿತವಾಗಿ ಒಪ್ಪಿಗೆ ನೀಡತಕ್ಕದ್ದು. ಯಾವ ಜಿಲ್ಲೆಗೆ ವರ್ಗಾವಣೆ ಆಗಿ ಹೋಗಬೇಕು ಆ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪೂರ್ವಾನುಮೋದನೆ ಪಡೆದುಕೊಳ್ಳತಕ್ಕದ್ದು. ಇದನ್ನು ಗ್ರಾಮ ಪಂಚಾಯತಿ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳನ್ನು ಬಿಡುಗಡೆ ಮಾಡಬೇಕಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಲಿಖಿತವಾಗಿ ಖಚಿತಪಡಿಸಿಕೊಳ್ಳತಕ್ಕದ್ದು.

2) ಗ್ರಾಮ ಪಂಚಾಯತಿ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳ ವೃಂದದಲ್ಲಿ ಸದರಿ ನೌಕರರ ಪರಿವೀಕ್ಷಣಾವಧಿ ತೃಪ್ತಿಕರವಾಗಿ ಘೋಷಣೆಯಾಗಿರಬೇಕು.
3) ನೌಕರರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಇರಬಾರದು ಹಾಗೂ ಹೂಡಲು ಉದ್ದೇಶಿಸಿರಬಾರದು.
4) ಇವರ ಜೇಷ್ಠತೆಯು ವರ್ಗಾವಣೆ ಹೊಂದಿದ ಜಿಲ್ಲೆಯಲ್ಲಿ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ ನಿಯಮಗಳು) ನಿಯಮಗಳು, 1957 ರ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
5) ಈ ನೌಕರರು ಯಾವುದೇ ವರ್ಗಾವಣೆ ಭತ್ಯೆ, ಪ್ರಯಾಣ ಭತ್ಯೆ ಹಾಗೂ ಸೇರುವಿಕೆ ಕಾಲಕ್ಕೆ ಅರ್ಹರಿರುವುದಿಲ್ಲ.
6) ಗ್ರಾಮ ಪಂಚಾಯತಿ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳ ವೃಂದದ ನೇರ ನೇಮಕಾತಿ ಕೋಟಾದಲ್ಲಿ ಖಾಲಿ ಹುದ್ದೆ ಲಭ್ಯವಿದ್ದಲ್ಲಿ ಮಾತ್ರ ಪರಿಗಣಿಸತಕ್ಕದ್ದು.
7) ಯಾವುದೇ ಕಾರಣಕ್ಕೂ ಬಡ್ತಿ ಕೋಟಾದ ಹುದ್ದೆಯ ಎದುರು ಪರಿಗಣಿಸತಕ್ಕದ್ದಲ್ಲ.
8) ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ನಿಯಮ 16 ಎ ರನ್ವಯ ಒಂದಕ್ಕಿಂತ ಹೆಚ್ಚು ಸಲ ಒಂದು ಜಿಲ್ಲಾ ವೃಂದದಿಂದ ಮತ್ತೊಂದು ಜಿಲ್ಲಾ ವೃಂದಕ್ಕೆ ವರ್ಗಾವಣೆ ಮಾಡಲು ಅವಕಾಶವಿರುವುದಿಲ್ಲ. ಈಗಾಗಲೇ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು/ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳು ಒಂದು ಬಾರಿ ಅಂತರ್ ಜಿಲ್ಲೆ ವರ್ಗಾವಣೆ ಆಗಿದ್ದರೆ ಮತ್ತೊಮ್ಮೆ ಪರಿಗಣಿಸಲು ಅವಕಾಶವಿರುವುದಿಲ್ಲ.

ಮೇಲಿನ ನಿಬಂಧನೆಗಳು ಪೂರೈಸುವ ಬಗ್ಗೆ ಖಚಿತಪಡಿಸಿಕೊಂಡ ನಂತರ ಮಾತ್ರ ಸದರಿ ನೌಕರರನ್ನು ಅವರ ಹುದ್ದೆಯಿಂದ ಬಿಡುಗಡೆ ಮಾಡತಕ್ಕದ್ದು.

(ಟಿ.ಪಿ.ಅರುಣ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬಾಗಲಕೋಟೆ, ಶಿವಮೊಗ್ಗ, ಬೆಳಗಾವಿ, ರಾಯಚೂರು ಮತ್ತು ತುಮಕೂರು ಜಿಲ್ಲಾ ಪಂಚಾಯತಿಗಳು.
2. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
4. ನಿರ್ದೇಶಕರು (ಪಂ.ರಾಜ್-1), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಸಹಾಯಕರು.
5. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.